ದ.ರಾ. ಬೇಂದ್ರೆ ಅವರ ಕಾವ್ಯಾಧ್ಯಯನ, ಪ್ರಸಾರದ ಕೆಲಸವನ್ನು ಅವಿರತವಾಗಿ ಮಾಡಿಕೊಂಡು ಬಂದ ಜಿ. ಕೃಷ್ಣಪ್ಪ 'ಬೇಂದ್ರೆ ಕೃಷ್ಣಪ್ಪ' ಎಂದೇ ಪ್ರಸಿದ್ಧರು. 'ಹಾಡುಹಕ್ಕಿ ಅಂಬಿಕಾತನಯದತ್ತ', 'ನಾಕುತಂತಿ–ಒಂದು ಟಿಪ್ಪಣಿ', 'ಬೇಂದ್ರೆ ಕಾವ್ಯ: ಪದನಿರುಕ್ತ', 'ಸರಳ ಕನ್ನಡದಲ್ಲಿ ಲಕ್ಷ್ಮೀಶನ ವಚನ ಜೈಮಿನಿ ಭಾರತ', 'ರಾಘವಾಂಕನ ವಚನ ಹರಿಶ್ಚಂದ್ರ ಚಾರಿತ್ರ' ಹಾಗೂ 'ಕನಕದಾಸರ ನಳದಮಯಂತಿ ಪ್ರೇಮಕಥೆ' ಅವರ ಕೆಲವು ಕೃತಿಗಳು. ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಯಾಗಿ ನಿವೃತ್ತಿ ಹೊಂದಿದ್ದಾರೆ. ಸದ್ಯಕ್ಕೆ ಕುವೆಂಪು ಸಾಹಿತ್ಯ ಅಧ್ಯಯನ ನಿರತರು.

ಹೊಂದಿರುವುದು ಎಂಬ ಅರ್ಥದಲ್ಲಿ 'ಹಿನಿ' ಪದ ಬಳಸಿದ್ದಾರೆ ಎಂಬುದು ನನ್ನ ಅಭಿಪ್ರಾಯ. ಚೆಂದುಟಿಯು ಆ ಗುಣ ಸಾದೃಶ್ಯವನ್ನು ಹೊಂದಿದೆ. ಹಾಗಾಗಿ ಕವಿ ತುಟಿಯನ್ನು ಮೇಲಿನಂತೆ ವರ್ಣಿಸಿದ್ದಾರೆ.

## ಮೋಡಗೊಲೆ

ಗೊಲೆ (ನಾ). (ಹೂವು, ಹಣ್ಣು ಮೊದಲಾದವುಗಳ) ಗೊಂಚಲು; ಗುಚ್ಛ.

ಪಂಪನು 'ಭಾರತ'ದಲ್ಲಿ ಕೆಂಪಾದ ಗೊನೆಯನ್ನು 'ಕೆಂಗೊಲೆ' ಪದ ಪ್ರಯೋಗಿಸಿ; 'ಆದಿಪುರಾಣ'ದಲ್ಲಿ ಹಣ್ಣಿನ ಗೊಂಚಲನ್ನು 'ಪಣ್ಗೊಲೆ' ಪದ ಪ್ರಯೋಗಿಸಿ ಬಣ್ಣಿಸಿದ್ದಾನೆ. ಆಂಡಯ್ಯನು 'ಕಬ್ಬಿಗರ ಕಾವ'ದಲ್ಲಿ 'ಪೆಣ್ಗೊನೆ' ಪದ ಬಳಸಿದ್ದಾನೆ. ಕುವೆಂಪು ಅವರು ಕವಿಶೈಲದಲ್ಲಿ ಸದಾ ಬಾನಿನ ಮೋಡಗಳ ವೈಭವವನ್ನು ಕಂಡು ಹರ್ಷಪಡುತ್ತ 'ಮೋಡಗೊಲೆ' ಪದ ಸೃಷ್ಟಿಸಿ ಮುಗಿಲ ಗೊಂಚಲನ್ನು ವರ್ಣಿಸಿದ್ದಾರೆ. ಅವರು 'ಪ್ರಕೃತಿಯಾರಾಧನೆಯೆ ಪರಮನಾರಾಧನೆ' ಎಂದು ನಿಸರ್ಗದಲ್ಲಿ ದೇವರನ್ನು ಕಂಡವರು. 'ಕವಿಶೈಲ'ದಲ್ಲಿ ಅವರು ಕಂಡ ದೇವರು ಇದು:

'ಅಲೆಯಲೆಯಲೆ ಅಲೆವ ಮಲೆಯ
ಬಾನ ಕರೆಯ ಮೋಡಗೊಲೆಯ
ಕವಿಶೈಲದ ಸಂಜೆಯಂತೆ
ನನ್ನ ದೇವರು'
(ಬೆನಕನ ಚೌತಿ: ಜೇನಾಗುವಾ)

## ದೂತಭಿಕ್ಷು

ಸತ್ಯ, ಅಹಿಂಸೆ, ಉಪವಾಸ ವ್ರತದ ಅಸ್ತ್ರಗಳೊಂದಿಗೆ ಸ್ವಾತಂತ್ರ್ಯ ಹೋರಾಟ ನಡೆಸಿದವರು ಮಹಾತ್ಮಾಗಾಂಧಿ. ಭಿಕ್ಷುಯೆಂದರೆ ಬೌದ್ಧ ಸನ್ಯಾಸಿ. ಭಿಕ್ಕುವಿನಂತೆ ಸ್ವಾರ್ಥರಹಿತವಾಗಿದ್ದು, ದೇಶದ ಸ್ವಾತಂತ್ರ್ಯಕ್ಕಾಗಿ ತಮ್ಮನ್ನು ಅರ್ಪಿಸಿಕೊಂಡವರು ಗಾಂಧೀಜಿ. ಅವರನ್ನು ಕುವೆಂಪು 'ದೂತ ಭಿಕ್ಷು' ಪದಸೃಷ್ಟಿಸಿ ಬಣ್ಣಿಸಿದ್ದಾರೆ. ಕವಿಯು ಈಶ್ವರ ಕೃಪಾಬಲವನ್ನು ಬೇಡಿಕೊಳ್ಳುವ ಸಲುವಾಗಿ ಭೂಮಾತೆ ಕಳುಹಿಸಿರುವ 'ದೂತ ಭಿಕ್ಷು' ಗಾಂಧೀಜಿ ಎಂದು ಚಿತ್ರಿಸಿದ್ದಾರೆ.

'ಈಶ್ವರ ಕೃಪಾಬಲದ ಯಾಚನೆಯ ಸಲುವಾಗಿ
ಭೂಮಾತೆ ಕಳುಹಿಸಿದ ದೂತಭಿಕ್ಷು'
(ಶ್ರೀಸ್ವಾತಂತ್ರ್ಯೋದಯ ಮಹಾಪ್ರಗಾಥಾ: ಇಕ್ಷುಗಂಗೋತ್ರಿ)

## ಮರದವಸಿ

'ಪ್ರೇತ ವೃಕ್ಷ' ಕವನದಲ್ಲಿ ಆ ವೃಕ್ಷವನ್ನು 'ಮರದವಸಿಯ ಮೂರುತಿ' ಎಂದು ಕರೆದಿದ್ದಾರೆ. 'ಮರದವಸಿ'ಯ ಅಚ್ಚಗನ್ನಡ ಹೊಸಪದ ಸೃಷ್ಟಿಸಿ; 'ಮೂರುತಿ' ಎಂಬಲ್ಲಿ ತದೇಕ ಚಿತ್ತದಿಂದ ಧ್ಯಾನಶೀಲವಾದ ಸ್ಥಿತಿಯನ್ನು ಚಿತ್ರಿಸಿದ್ದಾರೆ. ಅಂತಹ ತಪಸ್ಸು ವ್ಯರ್ಥವಾಗುವುದಿಲ್ಲ. ಮುಂದಕ್ಕೆ ಶಾಶ್ವತ ಯಶಸ್ಸು ಮತ್ತು ಕೊಂಡಾಡಿ ಹೊಗಳದ ನಿಜಕೀರ್ತಿ ನಿಶ್ಚಿತ. ಅಂತಹ ಮಂಗಳಾರತಿ ನಿನಗೆ ಕಾಯುತ್ತಿದೆ ಎಂದು ಮಂಗಳ ಸೂಚನೆ ನೀಡಿದ್ದಾರೆ.